ಛತ್ರ ಖಾಲಿ ಇದೆ
ಶ್ರೀಮತಿ ಬೀಬಿ, ಶ್ರೀ ಎಸ್. ಚನ್ನಯ್ಯ ಕಲ್ಯಾಣ ಮಂಟಪ, CFTRI Quarters ಎದುರು, ವಾಲ್ಮೀಕಿ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು.
ಹೊಸದಾಗಿ ನಿರ್ಮಿಸಿರುವ ಕಲ್ಯಾಣ ಮಂಟಪ
ಸಂ: 9844932498

ಆಂದೋಲನ
ದಿನಪತ್ರಿಕೆ
ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

ಎಸ್.ಡಿ.ಜೆ. ಗೋಲ್ಡ್ ಕಂಪನಿ
8548857578

ಸಂಪುಟ: ೪೬ ಸಂಚಿಕೆ: ೩೫೧, ರಾಷ್ಟ್ರೀಯ ಶಕ ೧೯೩೯ ಶಿಶಿರ–ಪುಷ್ಯ ೧೦, ● ತ್ರಯೋದಶಿ– ರೋಹಿಣಿ, ಭಾನುವಾರ, ಡಿ.೩೧, ೨೦೧೭, ದೂರವಾಣಿ: ೨೪೪೪೫೦೧, ೨೪೪೪೫೦೪, ೨೪೪೪೫೦೫, ಫ್ಯಾಕ್ಸ್: ೨೪೪೪೫೦೩, ಪುಟ : ೧೨+೪, ರೂ. ೩

ಸಂಭ್ರಮ, ಸಡಗರದ ಮಹಾಪೂರ

ಮೈಸೂರಿನ ಓಪನ್ ಸ್ಟ್ರೀಟ್ ಫೆಸ್ಟಿವಲ್‌ಗೆ ಹರಿದು ಬಂದ ಜನಸಾಗರ

ಮೈಸೂರು,ಡಿ.೩೦– ಜಗಂ ಜಾತ್ರೆ...! ಜನವೋ ಜನ...! ಏನುಂಟು, ಏನಿಲ್ಲ ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲವಾಗಿತ್ತು. ಹಳ್ಳಿಯ ಜಾತ್ರೆಗೆ ನಾಗರಿಕತೆಯ ಲೇಪ. ಪಂಚೆ ಉಟ್ಟ ಪುರುಷರು, ಸೀರೆ ತೊಟ್ಟ ನಾರಿಯರು ಕಾಣದಿದ್ದರೂ ಜೀನ್ಸ್, ಚೂಡಿದಾರ್ ಸೇರಿದಂತೆ ನವ ನಾಗರಿಕತೆಯ ಯುವ ಜನರು ಯಾವುದೋ ಮೋಡಿಗೊಳಗಾದವರಂತೆ ಹಿಂಡು ಹಿಂಡಾಗಿ ಲಗ್ಗೆ ಇಟ್ಟಿದ್ದರು!

ನಗರಕ್ಕೇ ಸುಪ್ರಸಿದ್ಧವಾದ ರಸ್ತೆಯಲ್ಲಿ ದೊಡ್ಡ ದೊಡ್ಡ ಮಾಲ್‌ಗಳು, ಮಹಲುಗಳು, ಅಂಗಡಿ, ಮುಂಗಟ್ಟುಗಳಿದ್ದರೂ ಜನರು ಅತ್ತ ಕಣ್ಣೆತ್ತಿ ನೋಡಲಿಲ್ಲ. ಏಕೆಂದರೆ ರಸ್ತೆಯಲ್ಲಿ ತೆರೆದಿದ್ದ ಮಳಿಗೆಗಳು, ಪ್ರದರ್ಶನಗೊಂಡ ಹಾಡು, ಕುಣಿತ, ತಿಂಡಿ, ತಿನಿಸು, ಬಟ್ಟೆಗಳು, ವೈವಿಧ್ಯಮಯ ಆಕರ್ಷಕ ವಸ್ತುಗಳ ಮುಂದೆ ದೊಡ್ಡ ಮಾಲ್‌ಗಳು ಮಂಕಾಗಿದ್ದವು.

ಹಳ್ಳಿಗಾಡಿನ ಜಾನಪದ ನೃತ್ಯಗಳಿಂದ ಆಧುನಿಕತೆಯ ಪಾಪ್ ಗೀತಗಾಯನದವರೆಗೂ ಸಂಗೀತ ಮಾರ್ದನಿಸಿತ್ತು. ರಾತ್ರಿಯಂತೂ ವಿದ್ಯುತ್ ದೀಪಗಳಿಂದ ಜಗಮಗಿಸಿದ ರಸ್ತೆಯು ನಾಡಹಬ್ಬ ದಸರಾ ಮರುಕಳಿಸಿತೆ ಎಂಬ ಅನುಮಾನ ಹುಟ್ಟುಹಾಕಿತ್ತು. ಜನಸಂದಣಿ ಇಡಿಕಿರಿದಿತ್ತು! ಜನರು ಒಬ್ಬರನ್ನೊಬ್ಬರು ಅಂಟಿಕೊಂಡೆ ಹೆಜ್ಜೆ ಇಡಬೇಕಾದ ಸ್ಥಿತಿ ಉದ್ಭವಿಸಿತ್ತು.

ಹೌದು. ಇದೆಲ್ಲ ಎಲ್ಲಿ, ಹೇಗೆ ಎಂಬ ಪ್ರಶ್ನೆ ಮೂಡಿರಬೇಕಲ್ಲವೇ? ಮೈಸೂರಿನಲ್ಲಿ ಆಯೋಜಿಸಿರುವ ಮೈಸೂರು ಮಾಗಿ ಉತ್ಸವದ ಅಂಗವಾಗಿ ಪ್ರವಾಸೋದ್ಯಮದ ಇಲಾಖೆ ವತಿಯಿಂದ ಶನಿವಾರ ನಗರದ ಡಿ.ದೇವರಾಜ ಅರಸು ರಸ್ತೆಯಲ್ಲಿ ಆಯೋಜಿಸಿದ್ದ ಓಪನ್ ಸ್ಟ್ರೀಟ್ ಫೆಸ್ಟಿವಲ್‌ನ ರಂಗು ರಂಗಿನ ಕ್ಷಣಗಳು ಇವು. ವರ್ಣನೆಗೆ ನಿಲುಕದ, ನಿತ್ಯದ ಜಂಜಾಟದಲ್ಲಿ ಮುಳುಗಿದ ಮನಸ್ಸುಗಳನ್ನೂ ಹಗುರಗೊಳಿಸುವ ಅಪರೂಪದ, ಅತ್ಯಂತ ಮಧುರ ಅನುಭವವನ್ನು ನೀಡಿದ್ದವು. ಒಂದರ್ಥದಲ್ಲಿ ಮನಸ್ಸುಗಳು ಮುಕ್ತವಾಗಿದ್ದವು. ವಯಸ್ಸು ಹಿನ್ನೆಲೆಗೆ ಸರಿದಿತ್ತು. ಸಂತೋಷ, ಸಂಭ್ರಮ, ಸಡಗರಗಳು ಮುನ್ನೆಲೆಯಲ್ಲಿದ್ದವು.

⏭ ೧೦

ಸಾಹಸ ಕ್ರೀಡೆಯ ರೋಮಾಂಚನ

ಸಂಗೀತದ ಅಲೆಯಲ್ಲಿ ತೇಲುತ್ತಿದ್ದವರಿಗೆ ಸಾಹಸ ಕ್ರೀಡೆಗಳು ರೋಮಾಂಚನಕಾರಿ ಅನುಭವ ನೀಡಿದವು. ರಸ್ತೆಯಲ್ಲಿ ನಾಲ್ವರನ್ನು ಮಲಗಿಸಿ ಅವರ ಮೇಲೆ ಸೈಕಲ್ ಸವಾರಿ ಮಾಡುತ್ತಿದ್ದವರನ್ನು ನೋಡಿ ಪುಳಕಿತರಾದರು. ತಿರುಗುವ ಬುಲ್ ಮೇಲೆ ಕುಳಿತು ನೂತನ ಅನುಭವ ಪಡೆದುಕೊಂಡರು. ಮಕ್ಕಳಿಗಾಗಿಯೂ ಆಟೋಟಗಳು ಇದ್ದವು.

ಮೈಸೂರಿನಲ್ಲಿ ಆಯೋಜಿಸಿದ್ದ ಓಪನ್ ಸ್ಟ್ರಿಟ್ ಫೆಸ್ಟಿವಲ್‌ನಲ್ಲಿ ಬೌನ್ಸಿ ಬಲೂನ್‌ನಲ್ಲಿ ಆಡುತ್ತಿರುವ ಮಕ್ಕಳು.

ದೇವರಾಜ ಅರಸು ರಸ್ತೆಯಲ್ಲಿ ನಡೆದ ಓಪನ್ ಸ್ಟ್ರೀಟ್ ಫೆಸ್ಟಿವಲ್‌ನಲ್ಲಿ ಭರತನಾಟ್ಯ ಪ್ರದರ್ಶಿಸುತ್ತಿರುವ ಯುವ ಕಲಾವಿದೆಯರು.

ಐ ಲವ್ ಮೈಸೂರು...

ಓಪನ್ ಸ್ಟ್ರೀಟ್ ಫೆಸ್ಟಿವಲ್ ತುಂಬ ಚೆನ್ನಾಗಿದೆ. ಮೈಸೂರು ಸಂಸ್ಕೃತಿಯನ್ನು ವೀಕ್ಷಿಸಿದ್ದೇವೆ. ಯುವಕರ ಎನರ್ಜಿ ಇಷ್ಟವಾಯಿತು. ಇಲ್ಲಿ ಬೋನ್ಸಾಯ್ ಗಿಡ ಕೊಂಡಿದ್ದು ಖುಷಿ ನೀಡಿದೆ. ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ಐ ಲವ್ ಮೈಸೂರು.

–ಮರಿಯನ್(ಐಲ್ಯಾಂಡ್), ಲೈಲೀ(ಉಕ್ರೇನ್), ವಿದೇಶಿಗರು.

ಗಮನಸೆಳೆದ ಸ್ಪೀಡ್ ಪೇಂಟಿಂಗ್

ಓಪನ್ ಸ್ಟ್ರೀಟ್ ಫೆಸ್ಟಿವಲ್‌ನ ಪೂರ್ಣ ಚಿತ್ರಣವನ್ನು ಮೂಲತಃ ಮೈಸೂರಿನವರೇ ಆದ ಬೆಂಗಳೂರಿನ ನಿವಾಸಿ ಕಲಾವಿದ ಅರ್ಜುನ್ ತಮ್ಮ ಸ್ಪೀಡ್ ಪೇಟಿಂಗ್ ಮೂಲಕ ಚಿತ್ರಿಸಿ ಗಮನ ಸೆಳೆದರು. ತಮ್ಮ ತಂದೆಯಿಂದ ಬಳುವಳಿಯಾಗಿ ಪಡೆದ ಕಲೆಯನ್ನು ಮುಂದುವರಿಸುತ್ತಿದ್ದಾರೆ. ಉಲ್ಲಾಸ್ ನಾಯಕ್ ಅವರ ಸ್ಪೀಡ್ ಪೇಂಟಿಂಗ್‌ನಿಂದ ಸ್ಫೂರ್ತಿ ಪಡೆದು ಸ್ಪೀಡ್ ಪೇಂಟಿಂಗ್‌ನಲ್ಲಿ ತೊಡಗಿಸಿಕೊಂಡಿದ್ದರು.

ಮರಗಾಲು ಕುಣಿತದ ಕಲಾವಿದರೊಂದಿಗೆ ಯುವತಿಯರ ಸೆಲ್ಫಿ.

ಶೋಷಿತರ ಮನೆಯಲ್ಲಿ ಹೊಸ ವರ್ಷ ಆಚರಣೆ

ಬೆಂಗಳೂರು,ಡಿ.೩೧–ಹೊಸ ವರ್ಷವನ್ನು ಮೋಜು–ಮಸ್ತಿಯೊಂದಿಗೆ ಬರಮಾಡಿಕೊಳ್ಳಲು ಹಲ ಪಕ್ಷಗಳ ನಾಯಕರು ತಯಾರಿ ನಡೆಸಿದ್ದರೆ ಸಮಾಜ ಕಲ್ಯಾಣ ಸಚಿವ ಎಚ್.ಆಂಜನೇಯ ಅವರು ಎಂದಿನಂತೆ ಶೋಷಿತರ ಮನೆಯಲ್ಲಿ ವಾಸ್ತವ್ಯ ಹೂಡಲು ನಿರ್ಧರಿಸಿದ್ದಾರೆ.

ಈ ಬಾರಿ ಅವರು ರಾಮನಗರ ಜಿಲ್ಲೆಯ ಜೇನುಕಲ್ಲು ಪಾಳ್ಯದ ಇರುಳಿಗರ ಕಾಲೋನಿಯ ಭರಿಯಪ್ಪ–ಚಿಕ್ಕಮಾದಮ್ಮ ಅವರ ನಿವಾಸದಲ್ಲಿ ಡಿ. ೩೧ ರ ರಾತ್ರಿ ವಾಸ್ತವ್ಯ ಹೂಡಲಿದ್ದು, ಮರುದಿನ ಹೊಸ ವರ್ಷವನ್ನು ಸ್ವಾಗತಿಸಲಿದ್ದಾರೆ.

ಹಿಂದಿನ ವರ್ಷಗಳಲ್ಲಿ ಅವರು ಚಾಮರಾಜನಗರ, ಮೈಸೂರು, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿರುವ ಗ್ರಾಮಗಳಲ್ಲಿ ಶೋಷಿತರ ನಿವಾಸದಲ್ಲಿ ಕಾಲ ಕಳೆದು ಅವರ ಕಷ್ಟ ಸುಖ ಕೇಳಿದ್ದರು. ಈ ಬಾರಿ ಅವರು ಜೇನು ಕಲ್ಲು ಪಾಳ್ಯದಲ್ಲಿ ಡಿ.೩೧ರ ರಾತ್ರಿ ವಾಸ್ತವ್ಯ ಹೂಡಲಿದ್ದು, ಮರು ದಿನ ಜನರ ಸಮಸ್ಯೆ ಕೇಳಲಿದ್ದಾರೆ.

⏭ ೧೦

ಮೂವರು ಪೊಲೀಸರ ಅಮಾನತು

ಮಂಡ್ಯ: ಪೊಲೀಸ್ ಇಲಾಖೆಯ ನಿಯಮ ಮೀರಿ ಅಧಿಕಾರ ದುರುಪಯೋಗ ಹಿನ್ನೆಲೆಯಲ್ಲಿ ಎಎಸ್‌ಐ ಸೇರಿದಂತೆ ಮೂವರು ಪೊಲೀಸ್ ಸಿಬ್ಬಂದಿಗಳನ್ನು ಅಮಾನತು ಮಾಡಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ರಾಧಿಕಾ ಆದೇಶ ಹೊರಡಿಸಿದ್ದಾರೆ.

⏭ ವರದಿ ಪುಟ ೩

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 360
ದೂರವಾಣಿ: 2425156

Sunday 31 December 2017
ಆಂದೋಲನ
ಅಂತರ ಜಾಲ ವಿಳಾಸ
andolana.epapertoday.com
ಸುದ್ದಿಗಾಗಿ
andolana@gmail.com

ಸ್ವಪಕ್ಷೀಯರ ವಿರುದ್ಧವೇ ಶ್ರೀನಿವಾಸಪ್ರಸಾದ್ ವಾಗ್ದಾಳಿ

- ೫ ಬಾರಿ ಸಂಸದರಾಗಿರುವ ಹೆಗಡೆಗೆ ಸಂವಿಧಾನದ ಅರಿವಿಲ್ಲ
- ಗೋ.ಮಧುಸೂದನ್‌ಗೆ ಇನ್ನೂ ಬುದ್ಧಿ ವಿಕಾಸ ಆಗಿಲ್ಲ

ಮೈಸೂರು,ಡಿ.೩೦–ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನದ ಬಗ್ಗೆ ಹಗುರವಾಗಿ ಮಾತನಾಡಿರುವುದು ಸರಿಯಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಅನಂತಕುಮಾರ್ ಹೆಗಡೆ ಅವರನ್ನು ಕೇಂದ್ರ ಸಚಿವರಾಗಿ ಮಾಡಿರುವುದೇ ಅವಮಾನ ಎಂದು ಸ್ವಪಕ್ಷೀಯರ ವಿರುದ್ಧವೇ ಮಾಜಿ ಸಚಿವ, ಬಿಜೆಪಿ ರಾಜ್ಯ ಉಪಾಧ್ಯಕ್ಷ ವಿ.ಶ್ರೀನಿವಾಸ ಪ್ರಸಾದ್ ಹರಿಹಾಯ್ದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನಂತಕುಮಾರ್ ಹೆಗಡೆ ಸಂವಿಧಾನದ ಬಗ್ಗೆ ಹಗುರವಾಗಿ ಮಾತನಾಡಿರುವುದನ್ನು ಕೇಳಿ ಮನಸಿಗೆ ನೋವಾಗಿದೆ ಎಂದರಲ್ಲದೆ, ಹೀಗೆ ಸಂವಿಧಾನದ ಬಗ್ಗೆ ಹಗುರವಾಗಿ ಮಾತನಾಡಲು ಮೊದಲು ಆರಂಭಿಸಿದ್ದು ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಎಂದರು.

ಮಧುಸೂದನ್ ಅವರ ಹೆಸರಿನಲ್ಲೇ ಗೋ.. ಗೋ.. ಅಂತ ಇದೆ! ಕಂ ಅಂತ ಯಾರೂ ಕರೆಯುವುದಿಲ್ಲ ಎಂದು ವಾಗ್ದಾಳಿ ನಡೆಸಿದರಲ್ಲದೆ, ಎರಡು ಬಾರಿ ವಿಧಾನಪರಿಷತ್ ಸದಸ್ಯರಾಗಿದ್ದ ಮಧುಸೂದನ್ ಅವರಿಗೆ ಇನ್ನೂ ಬುದ್ಧಿ ವಿಕಾಸ ಆಗಿಲ್ಲ. ಇಂತಹ ವ್ಯಕ್ತಿ ಬಿಜೆಪಿ ವಕ್ತಾರ ಎಂದು ವಿಷಾದಿಸಿದರು. ಸಂವಿಧಾನದ ಬಗ್ಗೆ ಕೀಳಾಗಿ ಮಾತನಾಡಿದ ನಂತರವೂ ಅದನ್ನು ಸಮರ್ಥಿಸಿಕೊಳ್ಳುವ ಮಧುಸೂದನ್‌ಗೆ ನಾಚಿಕೆಯಾಗಬೇಕೆಂದು ಕಿಡಿ ಕಾರಿದರು.

⏭ ೧೦

ಪ್ರಸಾದ್ ವಾಗ್ಬಾಣ

- ಸಂವಿಧಾನದ ಬಗ್ಗೆ ಹಗುರ ಹೇಳಿಕೆ ಸರಿಯಲ್ಲ
- ಹೆಗಡೆ ಸಚಿವರಾಗಿರುವುದೇ ಅವಮಾನ
- ಪೇಜಾವರ ಶ್ರೀಗಳು ಮಠಕ್ಕೆ ಸೀಮಿತವಾಗಲಿ
- ಸಂವಿಧಾನ ಹೊಸದಾಗಿ ರಚಿಸಲು ಸಾಧ್ಯವಿಲ್ಲ
- ಸಿದ್ದರಾಮಯ್ಯ ಸೋಲಿಸುವುದೇ ನನ್ನ ಗುರಿ

ಮಹಿಳೆಯರ, ಮಕ್ಕಳ ರಕ್ಷಣೆಗೆ ಸ್ವೂವ್ಯಾಕ್ ತಂಡ

ಮೈಸೂರು: ನೂತನ ವರ್ಷಾಚರಣೆ ಸಂದರ್ಭದಲ್ಲಿ ಮಹಿಳೆಯರು ಮತ್ತು ಮಕ್ಕಳು ಸಹ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದರಿಂದ ಅವರ ರಕ್ಷಣೆಗೆ ವಿಶೇಷ ಗಮನ ಹರಿಸಿರುವ ನಗರ ಪೊಲೀಸ್ ಆಯುಕ್ತ ಡಾ.ಎ.ಸುಬ್ರಮಣ್ಯೇಶ್ವರ ರಾವ್ ಅವರು ೩ ವಿಶೇಷ ತಂಡಗಳನ್ನು ರಚಿಸಿದ್ದಾರೆ.

ಹೊಸ ವರ್ಷಾಚರಣೆ ಸಂದರ್ಭದಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ಯಾವುದೇ ರೀತಿಯ ಕಿರುಕುಳ, ದೌರ್ಜನ್ಯಗಳು ಆದಲ್ಲಿ ಅಥವಾ ಆಗುವ ಸಂದರ್ಭಗಳು ಒದಗಿ ಬಂದಲ್ಲಿ ಅವರ ನೆರವಿಗೆ ತಕ್ಷಣ ಧಾವಿಸಲು ನಗರದಾದ್ಯಂತ ೩ ವಿಶೇಷ 'ಸ್ವೂವ್ಯಾಕ್' (ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗಾಗಿ ವಿಶೇಷ ಪೊಲೀಸ್ ಘಟಕ) ರಚಿಸಲಾಗಿದೆ.

ನಗರದ ೩ ವಿಭಾಗಗಳಾದ ದೇವರಾಜ, ನರಸಿಂಹರಾಜ, ಕೃಷ್ಣರಾಜ ವಿಭಾಗಗಳಲ್ಲಿ ವಿಭಾಗಕ್ಕೆ ಒಂದರಂತೆ ಈ ಪಡೆಗಳು ಕಾರ್ಯನಿರ್ವಹಿಸುತ್ತವೆ. ಪ್ರತಿ ತಂಡವೂ ಮಹಿಳಾ ಪೊಲೀಸ್ ಇನ್‌ಸ್ಪೆಕ್ಟರ್ ಅಥವಾ ಸಬ್‌ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ಕಾರ್ಯನಿರ್ವಹಿಸಲಿದ್ದು, ಇದರಲ್ಲಿ ಮಹಿಳಾ ಮತ್ತು ಪುರುಷ ಸಿಬ್ಬಂದಿಯೂ ಇರುತ್ತಾರೆ ಎಂದು ಆಯುಕ್ತರು ತಿಳಿಸಿದ್ದಾರೆ.

ಸಂಪರ್ಕ ಸಂಖ್ಯೆ

ನರಸಿಂಹರಾಜ
೮೮೬೧೭೮೬೩೨೮
ದೇವರಾಜ
೯೪೪೮೦೮೦೨೩೫
ಕೃಷ್ಣರಾಜ
೮೮೬೧೭೮೬೩೪೩

ಲಲಿತಾದ್ರಿಪುರ: ಜ.೫ರೊಳಗೆ ತಾತ್ಕಾಲಿಕ ಪಟ್ಟಿ ಪ್ರಕಟ

ಮುಡಾ ಸಾಮಾನ್ಯ ಸಭೆಯಲ್ಲಿ ಮಹತ್ವದ ನಿರ್ಧಾರ

ಮೈಸೂರು,ಡಿ.೩೦–೨೦೧೮ರ ವರ್ಷಾಚರಣೆಯ ಸಂಭ್ರಮಾಚರಣೆಯಲ್ಲಿ ತೊಡಗಿರುವ ಸಾಂಸ್ಕೃತಿಕ ನಗರಿಯ ಜನರಿಗೆ ಮತ್ತೊಂದು ಸಂಭ್ರಮ ನೀಡಲು ಮುಡಾ ಮುಂದಾಗಿದ್ದು, ಲಲಿತಾದ್ರಿಪುರ ಬಡಾವಣೆಯಲ್ಲಿ ನಿಗದಿಪಡಿಸಿರುವ ೫೩೦ ನಿವೇಶನಗಳ ಫಲಾನುಭವಿಗಳ ತಾತ್ಕಾಲಿಕ ಪಟ್ಟಿಯನ್ನು ವಾರದಲ್ಲಿ ಪ್ರಕಟಿಸಲು ನಿರ್ಧರಿಸಿದೆ.

ಮುಡಾ ಸಭಾಂಗಣದಲ್ಲಿ ಅಧ್ಯಕ್ಷ ಡಿ.ಧ್ರುವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಸಾಮಾನ್ಯ ಸಭೆಯಲ್ಲಿ ಇದೂ ಸೇರಿದಂತೆ ಕೆಲ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು.

ಲಲಿತಾದ್ರಿಪುರ ಬಡಾವಣೆಯಲ್ಲಿ ನಿಗದಿಪಡಿಸಿರುವ ೫೩೦ ನಿವೇಶನಗಳ ಅರ್ಜಿದಾರರ ತಾತಾಲ್ಕಿಕ ಪಟ್ಟಿಯನ್ನು ಜ.೫ರೊಳಗೆ ಬಿಡುಗಡೆ ಮಾಡಿ, ನಂತರ ಜನವರಿ ಅಂತ್ಯದೊಳಗೆ ಪೂರ್ಣ ಪ್ರಮಾಣದಲ್ಲಿ ಹಂಚಿಕೆ ಮಾಡುವ ಬಗ್ಗೆ ಮುಡಾ ಕಚೇರಿಯಲ್ಲಿ ನಡೆದ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅಭಿವೃದ್ಧಿಪಡಿಸಿರುವ ವಿವಿಧ ಬಡಾವಣೆಗಳಲ್ಲಿ ಆರ್ಥಿಕ ದುರ್ಬಲ ವರ್ಗದವರಿಗೆ ಗುಂಪು ವಸತಿ ಯೋಜನೆಯಡಿ ಮನೆಗಳನ್ನು ನಿರ್ಮಿಸಲು ಕೂಡ ರಾಜ್ಯ ಸರ್ಕಾರದ ಅನುಮೋದನೆ ಕೋರಲು ನಿರ್ಣಯ ಕೈಗೊಳ್ಳಲಾಯಿತು.

⏭ ೧೦

- ಗುಂಪು ಮನೆಗಾಗಿ ವಿವಿಧ ವರ್ಗಗಳಲ್ಲಿರುವ ದುರ್ಬಲರನ್ನು ಗುರುತಿಸಲು ಸಭೆ ಒಪ್ಪಿಗೆ
- ಹಂಚಿಕೆಗೆ ಸಿದ್ಧವಿರುವ ೮೫ ಸಿಎ ನಿವೇಶನಗಳಿಗೆ ಅರ್ಜಿ ಕರೆಯಲು ತೀರ್ಮಾನ
- ಹಂಚ್ಯಾ-ಸಾತಗಳ್ಳಿ ಬಳಿ ಕ್ರೀಡಾಂಗಣ ನಿರ್ಮಾಣಕ್ಕೆ ಕೆಎಸ್‌ಸಿಎಗೆ ೧೯ ಎಕರೆ